ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ದಕ್ಷಿಣ ಕನ್ನಡ, ಮಂಗಳೂರು.

**ಸೆಷನ್ಸ್ ಕೇಸ್ ನಂಬ್ರ 61/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶೇಖ್‌ಅಬ್ಬ | ಪ್ರಾಸಾಃ 2 |
| ತಂದೆಯ ಹೆಸರು | : | ವಿ ಕೆ ಜಕ್ರಿ ಅಬ್ಬ | ಚಾಸಾಃ 9 |
| ಪ್ರಾಯ | : | 75 ವರ್ಷ | **ದಿನಾಂಕಃ 30.01.2025** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ನಿವೃತ್ತ A.E. PWD, Mangaluru | |
| ವಾಸಸ್ಥಳ | : | ಮಂಗಳೂರು | |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ನಾನು PWD ಇಲಾಖೆಯಲ್ಲಿ JE ಆಗಿ 1976 ರಿಂದ 2004ರವರೆಗೆ ಮಂಗಳೂರಿನಲ್ಲಿ ಕೆಲಸ ನಿರ್ವಹಿಸಿರುತ್ತೇನೆ.

2. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸುರತ್ಕಲ್ ಪೋಲೀಸರ ಕೋರಿಕೆಯಂತೆ 21.04.1999 ರಂದು ಕುಳಾಯಿ ಸಿಂಡಿಕೇಟ್ ಬ್ಯಾಂಕ್‌ನ ಎದುರುಗಡೆ ಕೊಲೆ ಆದ ಸ್ಥಳದ ನಕಾಶೆ ತಯಾರಿಸಲು ಪೋಲೀಸರು ಕೇಳಿಕೊಂಡಂತೆ ನಾನು ಸ್ಥಳಕ್ಕೆ ಭೇಟಿ ಕೊಟ್ಟಿರುತ್ತೇನೆ. ಸದರಿ ಸ್ಥಳವನ್ನು ಪೋಲೀಸರಾದ ಚಾಸಾ-22ರವರು ತೋರಿಸಿಕೊಟ್ಟಿರುತ್ತಾರೆ. ನಾನು ಸ್ಥಳದಲ್ಲಿ ನಕಾಶೆ ತಯಾರಿಸಿರುತ್ತೇನೆ. ಈಗ ನೋಡಿದ ದಾಖಲೆ ಅದೇ ಆಗಿದ್ದು, ಸದರಿ ದಾಖಲೆಯನ್ನು ನಿಪಿ-2 ಎಂದು ಹಾಗೂ ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಜಿ ವಿ ಜಿ ವಕೀಲರಿಂದಃ**

3. ನಾನು ಸದರಿ ದಿನಾಂಕದಂದು ಸ್ಥಳಕ್ಕೆ ಹೋಗಿಲ್ಲ ಮತ್ತು ಪೋಲೀಸರ ಕೋರಿಕೆ ಮೇರೆಗೆ ನಿಪಿ-2 ನ್ನು ತಯಾರಿಸಿರುತ್ತೇನೆಂದರೆ ಸರಿಯಲ್ಲ.

ನಿಪಿ-2ರಲ್ಲಿ ಘಟನೆ ಆದ ಸ್ಥಳವನ್ನು ಎಲ್ಲಿ ಎಂದು ಬರೆದು ತೋರಿಸಿಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ</u> ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ., ಮಂಗಳೂರು.